**ಸಾಕ್ಷಿಯನ್ನು ದಿನಾಂಕ 22.06.2026 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ. ಎಂ ಆರ್ ವಕೀಲರಿಂದಃ**

ನನ್ನ ಸಾಕ್ಷ್ಯದ ಹೇಳಿಕೆಯನ್ನು ಪ್ರಮಾಣಪತ್ರದ ರೂಪದಲ್ಲಿ ನನ್ನ ಹೇಳಿಕೆಯಂತೆ ತಯಾರಿಸಿ ಸಲ್ಲಿಸಿದ್ದು ಅದರಲ್ಲಿರುವ ವಿಚಾರಗಳು ಸತ್ಯವಾಗಿರುತ್ತವೆ. ಸದರಿ ಈ ಪ್ರಮಾಣಪತ್ರದಲ್ಲಿರುವ ಸಹಿ ನನ್ನದೇ ಇರುತ್ತದೆ. ನನ್ನ ವಾದಕ್ಕೆ ಪೂರಕವಾಗಿ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಶಾನೆಕರಿಸಿಕೊಳ್ಳಬೇಕೆಂದು ಕೋರುತ್ತೇನೆ.

1) ಗಾಯದ ಪ್ರಮಾಣ ಪತ್ರವನ್ನು ನಿಪಿ1 ಎಂದು ಗುರುತಿಸಲಾಯಿತು.

2) ದೂರನ್ನು ನಿಪಿ2 ಎಂದು ಗುರುತಿಸಲಾಯಿತು.

3) ಎಫ್ ಐ ಆರ್ ಅನ್ನು ನಿಪಿ3 ಎಂದು ಗುರುತಿಸಲಾಯಿತು.

4) ಅಂತಿಮ ವರದಿಯನ್ನು ನಿಪಿ4 ಎಂದು ಗುರುತಿಸಲಾಯಿತು.

5) ಎರಡು ಐ.ಎಂ. ವಿ ವರದಿಯಗಳನ್ನು ನಿಪಿ 5 ಮತ್ತು 6 ಎಂದು ಗುರುತಿಸಲಾಯಿತು.

6) ಗಾಯದ ಪ್ರಮಾಣ ಪತ್ರವನ್ನು ನಿಪಿ7 ಎಂದು ಗುರುತಿಸಲಾಯಿತು.

7) ಔಷಧಿ ರಶೀದಿಗಳನ್ನು ನಿಪಿ8 ಎಂದು ಗುರುತಿಸಲಾಯಿತು.

8)ಚಿಂತಾಮಣಿ ಸರ್ಕಾರಿ ಆಸ್ಪತ್ರೆಯ ಹೊರ ರೋಗಿ ಚೀಟಿಯನ್ನು ನಿಪಿ9 ಎಂದು ಗುರುತಿಸಲಾಯಿತು.

9)2 ಔಷಧಿ ಚೀಟಿಗಳನ್ನು ನಿಪಿ10 ಎಂದು ಗುರುತಿಸಲಾಯಿತು.

10) ವಿಕ್ಟೋರಿಯಾ ಆಸ್ಪತ್ರೆಯ ಹೊರ ರೋಗಿಯ ಚಿಕಿತ್ಸಾ ಪುಸ್ತಕವನ್ನು ನಿಪಿ11 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಜೆ. ಎನ್ ವಿ. ವಕೀಲರಿಂದಃ**

ನನ್ನ ಯಜಮಾನರಿಗೆ ದ್ವಿಚಕ್ರ ವಾಹನ ಓಡಿಸಲು ಲೈಸನ್ಸ ಇತ್ತು. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನ್ನ ಯಜಮಾನರಿಗೆ ಲೈಸನ್ಸ ಇಲ್ಲದಿದ್ದರೂ

ಇದೆ ಎಂದು ಮತ್ತು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲದಿದ್ದರೂ ಮಾಡಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚೇಳೂರಿನಿಂದ ಅಪಘಾತ ಸ್ಥಳಕ್ಕೆ ಬರವ ನಡುವೆ ಯಾವುದೇ ಹಂಪ್ ಇಲ್ಲ ಎಂದರೆ ಸರಿಯಲ್ಲ. ಕೆ ಆರ್ ಟಿ ಸಿ ಬಸ್ ಸ್ಟ್ಯಾಂಡ್ ನಿಂದ ಅಪಘಾತ ಸ್ಥಳಕ್ಕೆ ಬರಲು ಒಂದು ದೊಡ್ಡ ಹಂಪ್ಸ ಇದೆ ಎಂದರೆ ಸರಿ. ಸಾಮಾನ್ಯವಾಗಿ ಕೆ ಆರ್ ಟಿ ಸಿ ಬಸ್ ಸ್ಟ್ಯಾಂಡ್ ನಿಂದ ಯಾವುದೇ ಬಸ್ ಗಳ ದೊಡ್ಡ ಹಂಪ್ಸ ಇರುವ ಕಾರಣ ವೇಗವಾಗಿ ಬರಲು ಸಾಧ್ಯವಾಗಿ ಬರಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ.

ಅಪಘಾತವಾದ ನಂತರ ಚಿಂತಾಮಣಿಗೆ ಚಿಕಿತ್ಸೆಗಾಗಿ ಸೇರಿಕೊಂಡಿದ್ದೇವೆ. ವೈದ್ಯರಿಗೆ ಅಪಘಾತದ ವಿಚಾರವನ್ನು ತಿಳಿಸಿದ್ದೇನೆ. ನಾನು ವೈದ್ಯರಿಗೆ ನಾನಾಗಿ ಖುದ್ದಾಗಿ ಬಿದ್ದು ಗಾಯ ಮಾಡಿಕೊಂಡಿದ್ದೇನೆ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ನಂತರ ನಾನು ವಿಕ್ಟೋರಿಯಾ ಆಸ್ಪತ್ರೆ, ಲಕ್ಷ್ಮೀ ಆಸ್ಪತ್ರೆ ಗಳಿಗೆ ತೋರಿಸಿದ್ದೇನೆ. ಲಕ್ಷ್ಮೀ ಆಸ್ಪತ್ರೆಯಲ್ಲಿ ಚಿಕಿತ್ಸೆ ತೆಗೆದುಕೊಂಡಿರುವ ಬಗ್ಗೆ ದಾಖಲಾತಿಯನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಬಿಲ್ ಗಳನ್ನು ಕೊಟ್ಟಿದ್ದಾರೆ. ಕೇಸಿಗಾಗಿ ಬಿಲ್ ಗಳನ್ನು ಸೃಷ್ಠಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ವಿಕ್ಟೋರಿಯಾ ಆಸ್ಪತ್ರೆಗೆ ತೋರಿಸುವ ಸಮಯದಲ್ಲಿ ನಾನೇ ವಾಹನದಿಂದ ಬಿದ್ದು ಗಾಯಗೊಂಡಿದ್ದೇನೆ ಎಂದು ತಿಳಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದಲೇ ಅಪಘಾತ ಉಂಟಾಗಿದೆ ಎಂದರೆ ಸರಿಯಲ್ಲ. ಅವರ ಅಜಾಗರೂಕತೆಯಿಂದ ಅಪಘಾತ ಉಂಟಾಗಿದೆ. 20 ಸಾವಿರ ರೂಪಾಯಿ

ಖರ್ಚಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 50 ಸಾವಿರ ರೂಪಾಯಿ ಬೈಕ್ ಡ್ಯಾಮೇಜ್ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾಖಲಾತಿಗಳನ್ನು ಸೃಷ್ಠಿ ಮಾಡಿಕೊಂಡು ಬಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಹೆಚ್ಚಿಗೆ ಬರಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಚಿಂತಾಮಣಿ.